


★ ಸೀಮಾ ಕುಲಕರ್ಣಿ
ಚಿತ್ರ: ಸುನೀಲ ಕುಲಕರ್ಣಿ

# ಚೀನೀಯರ ಹೊಸ ವರ್ಷದಲ್ಲಿ..

ಚೀನೀ ಭಾಷೆಯಲ್ಲಿ, **Gong Xi Fa Cai** ಎಂದರೆ, ಹೊಸ ವರ್ಷದ ಶುಭಾಶಯ ಎಂದರ್ಥ. ಕನ್ನಡಿಗರಿಗೆ ಯುಗಾದಿ ಪಾಡ್ಯವಿದ್ದಂತೆ, ಸಿಖ್ಖರಿಗೆ ಬೈಸಾಖಿಯಿದ್ದಂತೆ, ಕ್ರಿಶ್ಚಿಯನ್ನರಿಗೆ ಜನವರಿ 1ರಂತೆ, ಚೀನೀಯರ, ನವ ವರ್ಷದ ಮೊದಲ ದಿನವನ್ನು ಎಲ್ಲೆಡೆ ಜನವರಿ 28ರಂದು ಆಚರಿಸಿದರು. ಮಲೇಷ್ಯಾ, ಸಿಂಗಾಪುರ, ಹಾಂಕಾಂಗ್ ಹಾಗೂ ಎಲ್ಲ ದೇಶಗಳಲ್ಲೀ ಇರುವ ಚೀನೀಯರಿಗೆ ಜನವರಿ 28 ಸಂಭ್ರಮದ ದಿನ. ಅಂದಿನಿಂದ ಮುಂದಿನ ಹದಿನೈದು ದಿನಗಳವರೆಗೆ ಹೊಸ ವರ್ಷಾರಂಭವನ್ನು ಅವರು ಹಬ್ಬದಂತೆ ಆಚರಿಸಿದರು. ಈ ಹಬ್ಬವನ್ನು ವಸಂತೋತ್ಸವದ (spring festival) ಆಚರಣೆ ಎಂದೂ ಕರೆಯುತ್ತಾರೆ. ಚೀನೀಯರ ಚಂದ್ರಮಾನ ಕ್ಯಾಲೆಂಡರಿನಲ್ಲಿ ಉಳಿದೆಲ್ಲ ಹಬ್ಬಗಳಿಗಿಂತ ಇದು ಹೆಚ್ಚು ಮಹತ್ವದ ದೊಡ್ಡ ಹಬ್ಬ. ಪ್ರಾಣಿ, ಪಕ್ಷಿಗಳ ಚಿನ್ಹೆಗಳುಳ್ಳ, ಹನ್ನೆರಡು ವರ್ಷಗಳ ಚಕ್ರವು ತಿರುಗಿದಂತೆ, ಒಂದೊಂದು ಪಕ್ಷಿ, ಪ್ರಾಣಿ, ಆಯಾ ವರ್ಷದ ಶುಭದ ಚಿನ್ಹೆಯಾಗಿ ಚೀನೀ ಕ್ಯಾಲೆಂಡರಿನಲ್ಲಿ ಬರುತ್ತವೆ. ಈ ಸಲ, ಹುಂಜವು ಈ ವರ್ಷದ (2017) ಶುಭ ಚಿನ್ಹೆಯಾಗಿದೆ.

ಹೊಸ ವರ್ಷದ ಹಬ್ಬದ ತಯಾರಿಗಾಗಿ, ಮೂರು ವಾರಗಳ ಹಿಂದೆಯೇ ಚೀನೀಯರು ಸಿದ್ಧತೆ ನಡೆಸಿದರು. ಮನೆ ಮನೆಗಳಲ್ಲಿ, ಬೀದಿ ಬೀದಿಗಳಲ್ಲಿ ವರ್ಣಮಯ ವಾತಾವರಣ. ಹಬ್ಬದ ಸಾಮಾನುಗಳಿಂದ ತುಂಬಿ ಗಿಜಿಗುಡುವ ಮಾರುಕಟ್ಟೆಗಳಲ್ಲಿ ವ್ಯವಹಾರ ಭರಾಟೆಯಿಂದ ನಡೆಯುತ್ತದೆ. ಮನೆ, ಅಂಗಡಿಗಳು, ಹೋಟೆಲ್ಲುಗಳು ಹಾಗೂ ದೊಡ್ಡ ದೊಡ್ಡ ಕಚೇರಿಗಳ ಬಾಗಿಲಿನ ಎರಡೂ ಬದಿಗಳು ಸಮೃದ್ಧಿ ಮತ್ತು ಸಂತೋಷದ ಚಿನ್ಹೆಗಳಾದ ಪುಟಾಣಿ ಕಿತ್ತಳೆ ಹಣ್ಣುಗಳು ಸುರಿದಿರುವ ಗಿಡಗಳಿಂದ ಅಲಂಕಾರಗೊಂಡಿದ್ದವು.

ಸಿಂಗಾಪುರದ ಉಪನಗರಗಳ ಸಮುದಾಯ ಕೇಂದ್ರಗಳಲ್ಲಿ ಮತ್ತು ಜನಪ್ರಿಯ ಶಾಪಿಂಗ್ ಮಾಲುಗಳಲ್ಲಿ, ಅತ್ಯುನ್ನತ ಕೌಶಲ ಹಾಗೂ ಕಲಾತ್ಮಕ ಪರಿಣಿತಿಗಳನ್ನು ಒಳಗೊಂಡ ಸಾಂಪ್ರದಾಯಿಕ ಸಿಂಹದ ನೃತ್ಯ ಮತ್ತು ಡ್ರ್ಯಾಗನ್ ನೃತ್ಯಗಳನ್ನು ಪ್ರದರ್ಶಿಸಲಾಯಿತು. ಈ ನೃತ್ಯಗಳು ಹೊಸ ವರ್ಷದ ಉದ್ದಕ್ಕೂ ಉತ್ತಮ ಅದೃಷ್ಟ ಮತ್ತು ಸಮೃದ್ಧಿಗಳನ್ನು ತರುತ್ತವೆ ಎಂಬುದು ಚೀನೀಯರಲ್ಲಿ